ಈ) ಸದರಿ ಉದ್ದೇಶಕ್ಕೆ ಅನುದಾನದ ಲಭ್ಯತೆಯ ಆಧಾರದ ಮೇಲೆ ಮೇಲ್ಕಂಡ ಸೌಲಭ್ಯಗಳನ್ನು ಕಲ್ಪಿಸಲಾಗುವುದು.

ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ

200 (559) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಾಗಡಿ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಾದರೆ, ಯಾವ್ಯಾವ ಶಾಲೆಗಳಲ್ಲಿ ಎಷ್ಟೆಷ್ಟು ಶಿಕ್ಷಕರ ಕೊರತೆ ಇರುತ್ತದೆ; (ವಿವರ ನೀಡುವುದು)

ಇ) ಯಾವ ಕಾಲಮಿತಿಯಲ್ಲಿ ಕೊರತೆ ಇರುವ ಶಿಕ್ಷಕರನ್ನು ನೇಮಕ ಮಾಡಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಹೌದು.

ಆ)

ಕ್ರ ಸಂ	ಹುದ್ದೆ ಖಾಲಿ ಇರುವ ಶಾಲೆಯ ಹೆಸರು	ವಿಷಯ
1	ಸಪ್ರೌಶಾ ಅರಸನಕುಂಟಿ	ಮುಖ್ಯ ಶಿಕ್ಷಕರು–1 ಚಿತ್ರಕಲೆ–1 ಕಲಾ–1
2	ಸಪ್ರೌಶಾ ಸಂಕೇಘಟ್ಟ	ಪಿ.ಸಿ.ಎಂ–1 ಹೂಲಿಗೆ–1
3	ಸಪ್ರೌಶಾ ಮಲ್ಲಿಗನಹಳ್ಳಿ	ಹೂಲಿಗೆ–1
4	ಸಪ್ರೌಶಾ ಗಂಗೋಸನಹಳ್ಳಿ	ಮುಖ್ಯ ಶಿಕ್ಷಕರು–1 ಹಿಂದಿ–1 ಸಂಗೀತ–1
5	ಸಪ್ರೌಶಾ ಮಾದಿಗೊಂಡನಹಳ್ಳಿ	ಮುಖ್ಯ ಶಿಕ್ಷಕರು–1
6	ಸಪ್ರೌಶಾ ಸುಗ್ಗನಹಳ್ಳಿ	ಚಿತ್ರಕಲೆ–1
7	ಸಪ್ರೌಶಾ ಶ್ರೀಪತಿಹಳ್ಳಿ	ಸೈ.ಶಿಡೊ–1 ಹೂಲಿಗೆ–1
8	ಸಪ್ರೌಶಾ ಕಾಗಿಮಡು	ದೈಶಿಶ–1, ಚಿತ್ರಕಲೆ–1
9	ಸಪ್ರೌಶಾ ದೊಡ್ಡಬಾಣಿ	ವೃತ್ತಿ ಶಿಕ್ಷಣ ಶಿಕ್ಷಕರು–1
10	ಸಪ್ರೌಶಾ ಮಾಡಬಾಳ್	ಮುಖ್ಯ ಶಿಕ್ಷಕರು–1 ದೈಶಿಶ–1
11	ಸಜಮೂಶಾ ಮಾಗಡಿ ಟೌನ್	ಮುಖ್ಯ ಶಿಕ್ಷಕರು–1 ಪಿ.ಸಿ.ಎಂ–2
12	ಸಪ್ರೌಶಾ ಕಲ್ಯಾಗೇಟ್ (ಬಾಲಕಿ)	ಪಿ.ಸಿ.ಎಂ–1 ಸಂಗೀತ–1 ದೈಶಿಶ–1
13	ಸಪ್ರೌಶಾ ಮಂಚನಬೆಲೆ	ಚಿತ್ರಕಲೆ–1
14	ಸಜಮೂಶಾ ಕುದೂರು	ದೈಶಿಶ–1
15	ಸಜಪೂಶಾ ತಿಪ್ಪಸಂದ್ರ	ಸೈ.ವಿ.ಜೆಡೊ–1
16	ಸಪ್ರೌಶಾ ಶ್ರೀಗಿರಿಪುರ	ಚಿತ್ರಕಲೆ–1
17	ಸಪ್ರೌಶಾ ಲಕ್ಕೇನ ಬಡಳ್ಳಿ	ಪಿ.ಸಿ.ಎಂ–1 ಹೂಟಿಗಾರಿಕೆ–1
18	ಸಪ್ರೌಶಾ ಉರ್ದು ಮಾಗಡಿ	ಹೂಟಿಗಾರಿಕೆ–1

ಇ) ಪ್ರಸ್ತುತ ಪ್ರೌಢ ಶಾಲಾ ಸಹ ಶಿಕ್ಷಕರ ನೇಮಕಾತಿ ಸಂಬಂಧ (ವೃತ್ತಿ ಶಿಕ್ಷಕರನ್ನು ಬಿಟ್ಟು) ಅಧಿಸೂಚನೆ ಹೊರಡಿಸಿದ್ದು, ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ.



ಉದ್ಯೋಗಿನಿ, ಆಸರೆ, ಆಧಾರ್ ಯೋಜನೆಗಳ ಗುರಿ

243 (365) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) :– ಮಾನ್ಯ ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಪಶುವೈದ್ಯಕೀಯ ಪರಿಷತ್‌ನಿಂದ ಇದುವರೆಗೂ ಐ.ವಿ.ಸಿ. ಅಧಿನಿಯಮದಡಿ ಮಾನ್ಯತೆ ಪಡೆದ ಪದವೀಧರರ ನೋಂದಣಿ ಬಗ್ಗೆ ವಿವರ ನೀಡುವುದು ;

ಆ) ಕೆ.ವಿ.ಸಿ. ನಿಯಮದಂತೆ ಪಶುವೈದ್ಯಕೀಯ ಪರಿಷತ್‌ನಲ್ಲಿ ಸೃಷ್ಟಿಯಾಗಿರುವ ಹುದ್ದೆಗಳೆಷ್ಟು ; ಇವುಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆ ಯಾವುದು ; (ಭರ್ತಿ ಮತ್ತು ಖಾಲಿ ಹುದ್ದೆಗಳ ವಿವರ ನೀಡುವುದು) ;

ಇ) ಪರಿಷತ್‌ನ ರಿಜಿಸ್ಟ್ರಾರ್ ಹುದ್ದೆಗೆ ಇರುವ ವಿದ್ಯಾರ್ಹತೆ ಏನು ; ನಿಯಮದ ವಿರುದ್ಧವಾಗಿ ರಿಜಿಸ್ಟ್ರಾರ್ ಹುದ್ದೆಗೆ ಮಾಡಿದ ನೇಮಕವನ್ನು ರದ್ದುಪಡಿಸಲಾಗುವುದೇ; (ವಿವರ ನೀಡುವುದು) ;

ಈ) ಎಂ.ಎಸ್.ವಿ.ಇ. ರೆಗ್ಯೂಲೇಷನ್ 2008ರಂತೆ ರಾಜ್ಯದಲ್ಲಿರುವ ಯಾವ ಯಾವ ಕಾಲೇಜುಗಳು ಮಾನ್ಯತೆಯನ್ನು ಪಡೆದಿವೆ ; (ಗೆಜೆಟ್ ಪ್ರತಿಯನ್ನು ಒದಗಿಸುವುದು) ;

ಉ) ಎಂ.ಎಸ್.ವಿ.ಇ. ರೆಗ್ಯೂಲೇಷನ್ 2008 ರಂತೆ ವಿಶ್ವವಿದ್ಯಾಲಯದಲ್ಲಿ ಇರಬೇಕಾದ ಮತ್ತು ಪ್ರಸ್ತುತ ಇರುವ ಸಿಬ್ಬಂದಿಗಳ/ಕಟ್ಟಡದ ವಿಸ್ತೀರ್ಣ (ನಕ್ಷೆ)/ಉಪಕರಣಗಳ ವಿವರ ನೀಡುವುದು ;

ಊ) ಐ.ವಿ.ಸಿ.ಯ ಮಾನ್ಯತೆ ಇಲ್ಲದ ಕಾಲೇಜಿಗೆ ವಿದ್ಯಾರ್ಥಿಗಳನ್ನು ದಾಖಲಿಸಿ ಅವರುಗಳ ಸಾವಿಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳೇನು;

ಋ) ಕಾಲೇಜುಗಳಲ್ಲಿ ಉತ್ಪಾದನೆಯಾಗುವ ತ್ಯಾಜ್ಯಗಳನ್ನು ಮಾಲಿನ್ಯ ನಿಯಂತ್ರಣ ಕಾಯ್ದೆಯಂತೆ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ನೀಡುವುದು)